**Com.O.S 153/2024**
**PW-1**

**ಸಾಕ್ಷಿಯನ್ನು ದಿನಾಂಕ 3.7.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಬಿ.ಐ.ಎಸ್ ವಕೀಲರಿಂದಃ</u>**

ನಾನು ಕಳೆದ 2 ವರ್ಷಗಳಿಂದ ವಾದಿ ಸಂಸ್ಥೆಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. 2 ನೇ ವಾದಿ ಸಂಸ್ಥೆಯವರು ಮೊದಲಿನಿಂದಲೂ ನಮ್ಮ ಸಂಸ್ಥೆಯ ಗ್ರಾಹಕರಿದ್ದು 2022-23 ನೇ ಸಾಲಿನ ಪಾಲಿಸಿ ಅನ್ವಯ ಅವರಿಗೆ ಪರಿಹಾರ ನೀಡಲಾಗಿದೆ. ನಾನು 2 ನೇ ವಾದಿ ಪರವಾಗಿಯೂ ಸಾಕ್ಷಿ ಹೇಳುತ್ತಿದ್ದೇನೆ. ನನಗೆ 2 ನೇ ವಾದಿಯು ಹೇಳಿರುವಷ್ಟು ಮಾಹಿತಿ ಗೊತ್ತಿದೆ. 2023 ರ ಮೇ ತಿಂಗಳಿನಲ್ಲಿ 2 ನೇ ವಾದಿಯ ಸಂಸ್ಥೆಯವರು ಪ್ರತಿವಾದಿ ಸಂಸ್ಥೆಗೆ ಸರಕನ್ನು ಕೊಟ್ಟಿದ್ದಾರೆ. ಅದು 3.5.2023 ರಂದು ಖರೀದಿದಾರರಿಗೆ ತಲುಪಿದೆ. ಪ್ರತಿವಾದಿ ಸಂಸ್ಥೆಯವರಿಗೆ ಕೊಟ್ಟಿದ್ದ ಸರಕಿನಲ್ಲಿ ಪುಡ್ ಗ್ರೇಡ್ ಸರಕನ್ನು ಪ್ಯಾಕ್ ಮಾಡುವ ಪ್ಲಾಸ್ಟಿಕ್ ರೋಲ್ ಇದ್ದವು. ಆ ಪ್ಲಾಸ್ಟಿಕ್ ಬಯೋಡಿಗ್ರೆಡಿಬಲ್ ಅಥವಾ ನಾನ್‌ಡಿಗ್ರೇಡಿಬಲ್ ಎಂಬ ಬಗ್ಗೆ ಗೊತ್ತಿಲ್ಲ. ಆ ರೋಲುಗಳನ್ನು ಕಾರ್ಟನ್ ಬಾಕ್ಸನಲ್ಲಿ ಪ್ಯಾಕ್ ಮಾಡಿ ಕಳುಹಿಸಿದ್ದರು. ಕಾರ್ಟನ್ ಬಾಕ್ಸಗಳು ಕಾರ್ಡಬೋರ್ಡ ಆಗಿದ್ದವು. ಆ ಸರಕನ್ನು ಯಾರು ಲೋಡ್ ಮಾಡಿದ್ದರು ಎಂದು ಗೊತ್ತಿಲ್ಲ. ಲಾರಿಯಲ್ಲಿ ಯಾವ ಮೆಟಿರಿಯಲ್‌ನ ಟಾರ್ಪಾಲನ್ನು ಉಪಯೋಗಿಸುತ್ತಾರೆ ಎಂದು ಗೊತ್ತಿಲ್ಲ. ನಂಜನಗೂಡಿನಿಂದ ಆ ಸರಕನ್ನು ವಿಲ್ಲುಪುರಕ್ಕೆ ಸಾಗಾಟ ಮಾಡಿದ್ದು ಅದು ನಂಜನಗೂಡಿನಿಂದ ಅಂದಾಜು 400 ಕಿ.ಮೀ ದೂರವಿರುತ್ತದೆ. ನಂಜನಗೂಡಿನಿಂದ ವಿಲ್ಲುಪುರಕ್ಕೆ ಲಾರಿಯಲ್ಲಿ ತಲುಪಲು ಎಷ್ಟು ಅವಧಿ ಬೇಕೆಂದು ಗೊತ್ತಿಲ್ಲ. ಅಷ್ಟು ದೂರ ಕ್ರಮಿಸಲು 10 ಗಂಟೆ ಸಾಕಾಗುತ್ತದೆ ಎಂದರೆ ನೇರವಾಗಿ ಹೋದರೆ ಸಾಕು. ಆ ಲಾರಿ ಪೂರ್ತಿ ಸರಕನ್ನು ತುಂಬಿದ್ದರೋ ಅಥವಾ ಖಾಲಿ ಇತ್ತೋ ಗೊತ್ತಿಲ್ಲ. ಸರ್ವೆಯರ್ ರವರು ಸರ್ವೆ ವರದಿಯನ್ನು ತಯಾರಿಸಿರುತ್ತಾರೆ. ಸರ್ವೆಯರ್

ರವರನ್ನು ನಮ್ಮ ಸಂಸ್ಥೆಯವರು ನೇಮಿಸುತ್ತಾರೆ. ನಂಜನಗೂಡು ಮತ್ತು ವಿಲ್ಲುಪುರ ಎರಡು ಕಡೆ ಸರ್ವೆ ಮಾಡಲಾಗಿರುತ್ತದೆ. ನಂಜನಗೂಡಿನಲ್ಲಿ ಮಾಡಿಸಿರುವ ಸರ್ವೆ ವರದಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರಕು ತುಂಬಿಕೊಂಡು ಹೋಗುವಾಗ ಮಧ್ಯ ತುಂಬಾ ಮಳೆಯಾಗಿತ್ತು ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿ ಸಂಸ್ಥೆ ಹವಾಮಾನ ವರದಿಯನ್ನು ಪರಿಶೀಲನೆ ಮಾಡಿ ಸರಕನ್ನು ಲೋಡ್ ಮಾಡಬೇಕಾಗಿತ್ತು ಎಂದರೆ ಸರಿಯಲ್ಲ. ಮೆಟಿರಿಯಲ್‌ನ್ನು ಹವಾಮಾನ ವರದಿಯನ್ನು ಪರಿಶೀಲನೆ ಮಾಡಿ ಪ್ಯಾಕ್ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಸಾಮಾನ್ಯವಾಗಿ ಪ್ಯಾಕ್ ಮಾಡುವಂತೆ ಮಾಡಿರುತ್ತಾರೆ. ಕಾರ್ಟನ್ ಬಾಕ್ಸನಲ್ಲಿ ತುಂಬಿದ ಬಳಿಕ ಅದನ್ನು ಪ್ಲಾಸ್ಟಿಕ್ ರಾಪ್ ಮಾಡುವ ಅವಕಾಶವಿದ್ದರೂ ಮಾಡಿರುವುದಿಲ್ಲ ಎಂದರೆ ಸಾಮಾನ್ಯವಾಗಿ ಪ್ಯಾಕ್ ಮಾಡುವಂತೆ ಮಾಡಿದ್ದಾರೆ. ದಿನಾಂಕ 12.5.2023 ಅಥವಾ13.5.2023 ರಂದು ಡ್ಯಾಮೇಜ್ ಸರ್ಟಿಪಿಕೆಟ್ ಕೊಟ್ಟಿರುತ್ತಾರೆ. ನಿಪಿ3 ರ ಹಿಂಭಾಗದಲ್ಲಿ ಸರಕನ್ನು ಪಡೆಯದಿರುವ ಬಗ್ಗೆ ಪ್ರತಿವಾದಿ ಸಂಸ್ಥೆಯವರು ಹಿಂಬರಹ ಬರೆದಿರುತ್ತಾರೆ. ಈಗ 2 ನೇ ವಾದಿ ಸಂಸ್ಥೆ ಅಸ್ತಿತ್ವದಲ್ಲಿದೆ. ನಿಪಿ3 ರ ಹಿಂಭಾಗದ ಹಿಂಬರಹವನ್ನು ಐ.ಟಿ.ಸಿ, ತಿರುಚಿ ಸಂಸ್ಥೆಯವರು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 2 ನೇ ವಾದಿ ಸಂಸ್ಥೆಯ ತಪ್ಪಿನಿಂದ ಸರಕಿಗೆ ಜಖಂ ಆಗಿದೆ ಎಂದರೆ ಸರಿಯಲ್ಲ. ವಾಪಸ್ ಬಂದಿದ್ದ ಸರಕನ್ನು 2 ನೇ ವಾದಿಗೆ ಕೊಟ್ಟಿರುತ್ತಾರೆ. ಆ ಸರಕನ್ನು 2 ನೇ ವಾದಿ ಸಂಸ್ಥೆಯವರು ಮರು ಉತ್ಪಾದನೆಗೆ ಇಟ್ಟುಕೊಂಡಿರಬಹುದು. 2 ನೇ ವಾದಿ ಸಂಸ್ಥೆಯವರು ಪ್ರತಿವಾದಿ ಸಂಸ್ಥೆಯವರಿಗೆ ಒತ್ತಡ ಹೇರಿ ಡ್ಯಾಮೇಜ್ ಸರ್ಟಿಪಿಕೆಟನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಇ ವೇಬಿಲ್ಲನ್ನು ಸರಕನ್ನು ಸಾಗಾಟ ಮಾಡುವ ಮೊದಲು ಕೊಡುತ್ತಾರೆ. 2 ನೇ ವಾದಿ ಸಂಸ್ಥೆ ಪರಿಹಾರ ಪಾವತಿಗೆ ಕೊಟ್ಟಿದ್ದ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ವಾದಿ ಸಂಸ್ಥೆಗೆ ಹಣ ಪಾವತಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರಬಹುದು.

ಈ ವೇಳೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದಿದ್ದರಿಂದ ಸಮಯ ನೀಡಲು ನಿರಾಕರಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು